# ಆವನಾವನ ಕಾಯ್ವ ಅವನಿಯೊಳಗೆ

1. Ref.: Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 136.
2. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 278.
3. **Note:** The wordings mainly are as per the book in Ref. 1 above. The wordings in the book in Ref. 1 above and that of the singer are slightly different and are marked in yellow highlights.
4. **Note:** There are lot of differences in wordings as per the book in Ref. 2 above with that of the book in Ref. 1 above and the singer. Hence, they are shown separately in green highlights.
5. **Note:** The Ankita is same in both the books. But the Ankita used by the singer is different. However, we have considered book in Ref.1 as standard and taken that Ankita for listing.

ರಾಗ: ಸಾರಂಗ ತಾಳ: ಝಂಪೆ

| | |
|---|---|
| ಆವನಾವನ ಕಾಯ್ವ ಅವನಿಯೊಳಗೆ | ಆವನಾವನ ಕಾಯ್ವ ಅವನಿಯೊಳಗೆ |
| ದೇವ ದೇವೇಶ ಶ್ರೀ ಹರಿಯಲ್ಲದೆ ‖ ಪ ‖ | ಸರ್ವ ಜೀವರಿಗೆ ಶ್ರೀ ಹರಿಯಲ್ಲದೆ ಕೃಷ್ಣ |
| | |
| ಆವ ತಂದೆಯು ಸಲಹಿದನು ಪ್ರಹ್ಲಾದನ | ಆವ ತಂದೆಯು ಸಲಹಿದನು ಪ್ರಹ್ಲಾದನ |
| ಆವ ತಾಯಿ ಸಲಹಿದಳು (ಕಾಯ್ದಳು) ಧ್ರುವರಾಯನ | ಆವ ತಾಯಿ ಸಲಹಿದಳು ಧ್ರುವನ |
| ಆವ ಸುತ (ಮಗ) ಸಲಹಿದನು ಆ ಉಗ್ರಸೇನನ | ಆವ ಸೋದರನು ಈಡೇರಿಸಿದ ವಿಭೀಷಣನ |
| ಜೀವರಿಗೆ ಪೋಷಕನು ಶ್ರೀ ಹರಿಯಲ್ಲದೆ ‖ ೧ ‖ | ಸರ್ವ ಜೀವರಿಗೆ ಶ್ರೀ ಹರಿಯಲ್ಲದೆ ಕೃಷ್ಣ |
| | |
| ಆವ ಬಂಧುವು ಸಲಹಿದನು ಗಜರಾಜನನು | ಆವ ಬಾಂಧವ ಕಾಯ್ದನೆಂದು ಕರಿರಾಜನ |
| ಆವ ಪತಿ ಕಾಯ್ದ ದ್ರೌಪದಿಯ ಮಾನ | ಆವ ಪತಿ ಕಾಯ್ದ ದ್ರೌಪದಿ ಮಾನವ |
| ಆವ ಸೋದರರು ಸಲಹಿದರು ವಿಭೀಷಣನ | ಆವ ಸಖನಾದ ಪಾಂಡವರ ಆಪತ್ತಿಗೆ |
| ಜೀವರಿಗೆ ದಾತೃ ಶ್ರೀ ಹರಿಯಲ್ಲದೆ ‖ ೨ ‖ | ಸರ್ವ ಜೀವರಿಗೆ ಶ್ರೀ ಹರಿಯಲ್ಲದೆ ಕೃಷ್ಣ |
| | |
| ಆವನಾಧಾರ ಅಡವಿಯೊಳಿಪ್ಪ ಮೃಗಗಳಿಗೆ | ಆವನಾಧಾರ ಅಡವಿಯೊಳಿರುವ ಮೃಗಗಳಿಗೆ |
| ಆವ ರಕ್ಷಕ (ಪಶು) ಪಕ್ಷಿ ಜಾತಿಗಳಿಗೆ | ಆವನಾಶ್ರಯ ಪಕ್ಷಿ ಜಾತಿಗಳಿಗೆ |
| ಆವ ಪೋಷಕನು ಗರ್ಭದಲ್ಲಿಪ್ಪ (ಶಿಶುವಿಂಗೆ) ಶಿಶುಗಳಿಗೆ | ಆವ ಪೋಷಕನು ಗರ್ಭದಲ್ಲಿದ್ದ ಶಿಶುಗಳಿಗೆ |
| ದೇವ (ಸಿರಿ) ಶ್ರೀ ಪುರಂದರ ವಿಠಲನಲ್ಲದಲೆ ‖ ೩ ‖ | ದೇವಗುರು ಪುರಂದರ ವಿಠಲನಲ್ಲದಲೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಯಾರು ಯಾರಿಗೆ ಆದರು? ಜೀವರಾಶಿಯಲ್ಲಿ ಯಾರು ಯಾರನ್ನೂ ಕಾಪಿಡಲು ಸ್ವತಂತ್ರರಲ್ಲ, ಶಕ್ತರಲ್ಲ. ಎಲ್ಲ ಜೀವರಿಗೂ ರಕ್ಷಕನೂ, ನಿಯಾಮಕನೂ, ಪ್ರೇರಕನೂ ಹರಿಯೊಬ್ಬನೇ. ಪ್ರಹ್ಲಾದನನ್ನು ಅವನ ತಂದೆ ಹಿರಣ್ಯಕಶಿಪುವೇ ಕೊಲ್ಲಲೆತ್ನಿಸಿದಾಗ, ಧ್ರುವನ ಮಲತಾಯಿ ಸುರುಚಿಯೇ ಅವನನ್ನು ಹೊರದೂಡಿದಾಗ; ವಿಭೀಷಣನ ಅಣ್ಣ ರಾವಣನೇ ತಮ್ಮನನ್ನು ಲಂಕೆಯಿಂದ ಹೊರಗಟ್ಟಿದಾಗ, ಗಜೇಂದ್ರನನ್ನು ಮೊಸಳೆ ಹಿಡಿದು ಹಿಂಸಿಸುತ್ತಿರುವಾಗ, ದುಃಶಾಸನನು ದ್ರೌಪದಿಯ ಮಾನಭಂಗ ಮಾಡಲು ಸಿದ್ಧನಾಗಿದ್ದಾಗ, ಪಾಂಡವರು ತೊಂದರೆಗೆ ಒಳಗಾದಾಗ ಅವರನ್ನೆಲ್ಲ ಸಲಹಿದವನು ಹರಿಯೇ. ಕಾಡಿನಲ್ಲಿರುವ ಪ್ರಾಣಿಗಳಿಗೆಲ್ಲ, ಪಕ್ಷಿಗಳಿಗೆಲ್ಲ ಅವನೇ ಆಸರೆ; ತಾಯಿಯ ಒಡಲಲ್ಲಿರುವ ಹಸುಳೆಗಳನ್ನು ಸಾಕುವವನು ಅವನೇ ತಾನೆ?

**ಉಗ್ರಸೇನ** - ಅಂಧಕ ವಂಶದ ಅಹುಕ ರಾಜನ ಎರಡನೆಯ ಮಗ. ಇವನ ಹೆಂಡತಿ ಪದ್ಮಾವತಿ. ಇವರ ಮಗ ಕಂಸ. ತನ್ನ ತಂದೆಯನ್ನು ತಳ್ಳಿ ತಾನೇ ಪಟ್ಟವೇರಿದ. ಕೃಷ್ಣನು ಕಂಸನನ್ನು ಕೊಂದು ಉಗ್ರಸೇನನನ್ನು ಮತ್ತೆ ಪಟ್ಟಕ್ಕೆ ಕುಳ್ಳಿರಿಸಿದನು.

**ದಾತೃ** = ದಾನಿ

**Classification:** Keerthane
**Ankita:** purandara vittala
**Location:** NA
**Category:** Dashavatara, Virakti, Pooja Tatva.
**Sub-Category:** bhumi, daiva, tayi, tande, prahallada, Dhruva, maga, ugrasena, jiva, Krishna, gaja, bandhu, pati, draupadi, Vibhishana, kaadu, mruga, pakshi,
**Pravachana:** Vid Kallapura Pavamanachar
**Explanation:** NA